ಪ್ರಶ್ನೆ ಕೇಳಬೇಕೇ ? ನಾವು ವಿತಕ್ಕೆ ಅಸೆಂಬ್ಲಿಗೆ ಬಂದಿದ್ದೇವೆ ? ದಯಮಾಡಿ ಹೇಳಿ. ನಮ್ಮ ಕ್ಷೇತ್ರದಲ್ಲಿರ ತಕ್ಕ ಕುಂದುಕೊರತೆಗಳಿಗೆ ಸಮಜಾಯಿಷಿ ಉತ್ತರ ಸಿಗಬಹುದೆಂದು ಬಂದಿದ್ದೇವೆ.

ಮಂತ್ರಿಗಳು ಯಾವ ರೀತಿ ಉತ್ತರ ಕೊಡಬೇಕೆಂದು ತಾವೇ ಹೇಳಿಕೊಟ್ಟರೆ, ಮಂತ್ರಿಗಳು ಅದೇ ರೀತಿ ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಆಯವ್ಯಯದ ಮೇಲಿನ ಚರ್ಚೆದುನ್ನು ತೆಗೆದು ಕೊಳ್ಳಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಸಭೆಯ ಸತ್-ಸಂಪ್ರದಾಯಗಳನ್ನು ಕಾಪಾಡಬೇಕಾಗಿದೆ. ಆದ್ದರಿಂದ ಸರ್ಕಾರದವರಿಗೆ ಈ ಪ್ರಶ್ನೆಗೆ ಉತ್ತರ ಕೊಡಲು ಸಾಧ್ಯವಾಗದಿದ್ದರೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು.—ಸರ್ಕಾರಕ್ಕೆ ನಾನೂ ಸಲಹೆ ಕೊಡಬಹುದು ಮತ್ತು ತಾವೂ ಸಹ ಸಲಹೆ ಕೊಡ ಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಇದನ್ನು ಜಾಗ್ರತೆ ಮುಗಿಸಬೇಕಾಗಿದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮ 334ರ ಕೆಳಗೆ ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ ಉತ್ತರ ತಯಾರಿದ್ದರೆ ಕೊಡುತ್ತೇವೆ. ಇಲ್ಲದಿದ್ದರೆ ಸಮಯ ಕೇಳುತ್ತೇವೆ. ಮತ್ತೊಂದು ದಿನ ಉತ್ತರ ಕೊಡುತ್ತೇವೆ.

ಅಧ್ಯಕ್ಷರು.—ಈಗ ಶ್ರೀ ಬಿ. ಆರ್. ನೀಲಕಂಠಪ್ಪನವರ ಪ್ರಶ್ನೆ.

(ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

(5) ರಾಣೆಬೆನ್ನೂರು ತಾಲ್ಲೂಕು ಗುಡ್ಡಾಪುರದಲ್ಲಿ ದನಗಳ ಜಾತ್ರೆಯಾಗುವ ಸ್ಥಳದಲ್ಲಿ ಮನೆಗಳನ್ನು ಕಟ್ಟುವುದು.

ಶ್ರೀ ಕೆ. ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ರಾಣೇಬೆನ್ನೂರ ತಾಲ್ಲೂಕ್ ಗುಡ್ಡಾಪುರ ಗ್ರಾಮದಲ್ಲಿ ಸರಕಾರಿ ಹಾಗೂ ದನಗಳ ಜಾತ್ರೆಯಾಗುವ ಸ್ಥಳದಲ್ಲಿ ಎಲ್ಲ ಕಾನೂನುಗಳನ್ನು ಉಲ್ಲಂಘಿಸಿ ಮನೆಕಟ್ಟಲು, ಕಂದಾಯ ನಿರೀಕ್ಷಕ ಮತ್ತು ಅದೇ ಗ್ರಾಮದ ಪಂಚಾಯಿತಿ ಆಡಳಿತಾಧಿಕಾರಿಯು ಜನರಿಗೆ ಪ್ರೋತ್ಸಾಹಿಸುವುದಲ್ಲದೆ ಕುಡಿಯುವ ನೀರಿನ ಪೈಪುಗಳನ್ನು ಒಡೆದು ಮನೆಕಟ್ಟಲು ನೀರು ಕೊಡುತ್ತಿರುವು ದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲದೆ ಸದರಿ ಅಧಿಕಾರಿಯನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಬೇಕೆಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೋಳಿವಾಡ್ ಅವರು ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ನಾನು ಕೊಡಲೇ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಅದರ ಮೇಲೆ ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

(6) ವಿಧಾನಸೌದದ ಮುಂಭಾಗದಲ್ಲಿ ಸ್ಥಾಪಿಸಿದ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಬಗ್ಗೆ ಅಸಮಾಧಾನ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ವಿಧಾನಸೌಧದ ಮುಂಭಾಗದಲ್ಲಿ ನಿಲ್ಲಿಸಿರುವ ಡಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಸಮರ್ಪಕವಾಗಿಲ್ಲದಿರುವ ಬಗ್ಗೆ ಹಲವಾರು ಈಗಾಗಲೇ ಅಸಮಾಧಾನ ವ್ಯಕ್ತ ಮಾಡಿದ್ದಾರೆ. ಕೆಂಗಲ್ ಹನುಮಂತಯ್ಯನವರ ಹೋಲಿಕೆಯೇ ಇಲ್ಲದ ಇಂತಹ ಪ್ರತಿಮೆಯನ್ನು ನಿರ್ಮಿಸಿ ವಿಧಾನಸೌಧದ ಮುಂದೆ ತಂದು ನಿಲ್ಲಿಸಿ, ರಾಷ್ಟ್ರಪತಿ ಶ್ರೀಯುತ ಜೈಲ್‌ಸಿಂಗ್ ಅವರಿಂದ ಅನಾವರಣಗೊಳಿಸಿದ ಅನುಚಿತ ಕೆಲಸಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಕೈಕೊಳ್ಳಲು ಹಾಗೂ ತೃಪ್ತಿಕರವಾದ ಬದಲಿ ಪ್ರತಿಮೆಯನ್ನು ನಿರ್ಮಿಸಿ ಸ್ಥಾಪಿಸಲು ತತ್‌ಕ್ಷಣ ಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ಸದರಿ ವಿಷಯದ ಬಗ್ಗೆ ಇದೇ ತಿಂಗಳು 15ನೇ ತಾರೀಖು ನಮ್ಮ ಬೆಂಗಳೂರು ನಗರಸಭೆಯ ಮಾಜಿ ಮೇಯರ್‌ಗಳಾದ ಶ್ರೀ ಲಿಂಗಯ್ಯನವರು, ಶ್ರೀ ತಿವಾರಿ ಅವರು, ಶ್ರೀ ಕೆ. ಎಂ. ನಂಜಪ್ಪನವರು, ಶ್ರೀ ತಿಮ್ಮರಾಯಿಗೌಡರು, ಶ್ರೀ ವಿ.ಆರ್. ನಾಯ್ಡು ಅವರು, ಶ್ರೀ ಎ. ಕೆ. ಅನಂತಕೃಷ್ಣ ಅವರು ಹಾಗೂ ಇತರರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಪ್ರಸ್ತಾಪ ಮಾಡಿದರು. ಅನಂತರ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಶ್ರೀ ಲಿಂಗಯ್ಯ